ಸಿಸಿನಂ. 339/2023

ಪಿಡಬ್ಲ್ಯೂ: 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 339/2023

ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ಮಂಜುನಾಥ |
| ತಂದೆಯ ಹೆಸರು | : | ಶಿವಾನಂದ ಹಳದನಕರ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 07-02-2025 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ : ಶ್ರೀ ಪಿ ಜಿ ಹೆಚ್ ವಕೀಲರಿಂದಃ</u>**

ನಾನು ದಿಃ 10-11-2021 ರಿಂದ ಇಲ್ಲಿಯವರೆಗೆ ನಾನು ಕುಮಟಾ ಆರಕ್ಷಕ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ನವೀನ ಡೊಂಗಾ ಗಾಂವಕರ , ಅಂಕೋಲಾ ಪೂಜಗೇರಿ ಮನೆಗೆ ದಿಃ 18-12-2023 ರಂದು ಉದ್ಘೋಷಣೆಯನ್ನು ಮಾಡಲು ನಾನು ಆರೋಪಿಯ ಮನೆಗೆ ಪಂಚರೊಂದಿಗೆ ಹೋದಾಗ ಅಲ್ಲಿ ಆರೋಪಿ ಇರಲಿಲ್ಲ . ಅಲ್ಲಿನ ಜನರಿಗೆ ವಿಷಯ ತಿಳಿಸಿ ಉದ್ಘೋಷಣೆಯನ್ನು ಜೋರಾಗಿ ಓದಿ ಹೇಳಿ ಅದರ ಪ್ರತಿಯನ್ನು ಆರೋಪಿಯ ಮನೆಯ ಮುಂದಿನ ಬಾಗಿಲಿಗೆ ಅಂಟಿಸಿರುತ್ತೇವೆ. ನಂತರ ಅಲ್ಲಿಂದ ಪಂಚರೊಂದಿಗೆ ಅಂಕೋಲಾ ಬಸ್ ನಿಲ್ದಾಣಕ್ಕೆ ಹೋಗಿ ಉದ್ಘೋಷಣೆಯನ್ನು ಜೋರಾಗಿ ಓದಿ ಹೇಳಿ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಉದ್ಘೋಷಣೆಯ

ಸಿಸಿನಂ. 339/2023

ಪಿಡಬ್ಲ್ಯೂ: 2

ಪ್ರತಿಯನ್ನು ಸದರಿ ನಿಲ್ದಾಣದ ನೋಟಿಸ್ ಬೋರ್ಡಿಗೆ ಅಂಟಿಸಿರುತ್ತೇವೆ. ನಂತರ ಅಲ್ಲಿಂದ ಪಂಚರ ಜೊತೆಗೆ ತಹಶೀಲ್ದಾರ ಕಚೇರಿಗೆ ಹೋಗಿ ಉದ್ಘೋಷಣೆಯನ್ನು ಜೋರಾಗಿ ಓದಿ ಹೇಳಿ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಉದ್ಘೋಷಣೆಯ ಪ್ರತಿಯನ್ನು ಸದರಿ ಕಚೇರಿಯ ನೋಟಿಸ್ ಬೋರ್ಡಿಗೆ ಅಂಟಿಸಿರುತ್ತೇವೆ. ನಂತರ ಪಂಚರೊಂದಿಗೆ ಅಂಕೋಲಾ ಪೋಲಿಸ್ ಠಾಣೆಗೆ ಹೋಗಿ ವಿಷಯವನ್ನು ತಿಳಿಸಿ ಉದ್ಘೋಷಣೆಯನ್ನು ಜೋರಾಗಿ ಓದಿ ಹೇಳಿ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಸದರಿ ಪೋಲಿಸ್ ಠಾಣೆಯ ಕಚೇರಿಯ ನೋಟಿಸ್ ಬೋರ್ಡಿಗೆ ಅಂಟಿಸಿರುತ್ತೇನೆ. ಈ ಬಗ್ಗೆ ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 12-30 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಈ ಬಗ್ಗೆ ವರದಿಯನ್ನು ಬರೆದು ನಮ್ಮ ಠಾಣೆಗೆ ನೀಡಿರುತ್ತೇವೆ. ಸದರಿ ಪಂಚನಾಮೆಯನ್ನು ಹಾಗೂ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ರವಿ ಮನೋಹರ ಗಾಂವಕರ ಮತ್ತು ಚಂದ್ರು ಪಕೀರ ಗಾಂವಕರ ಸಾಕೀನ ಇಬ್ಬರು ಪೂಜಗೇರಿ, ಅಂಕೋಲಾ ಅವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿ ಉದ್ಘೋಷಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -7 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನೋಡಿ ಗುರತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ಇಬ್ಬರು ಸಾಕ್ಷಿದಾರರ ಸಹಿಗಳನ್ನು ನಿಪಿ-8(ಬಿ) ಮತ್ತು ನಿಪಿ-8(ಸಿ) ಎಂದು ಗುರುತಿಸಲಾಯಿತು. ದಿಃ 20-01-2024 ರಂದು ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.